ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಹೆರಿಗೆ ಆಸ್ಪತ್ರೆ ಕಟ್ಟಡ ನವೀಕರಣ

988 - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಹೆರಿಗೆ ಆಸ್ಪತ್ರೆಯನ್ನು ಎಂದು ಕಟ್ಟಲಾಯಿತು?*

ಆ) *ಈ ಕಟ್ಟಡವು ಅತೀ ಪುರಾತನವಾಗಿದ್ದು ಇದನ್ನು ನವೀಕರಿಸುವ ಬಗ್ಗೆ ಹಿಂದಿನ ಆರೋಗ್ಯ ಸಚಿವರು ಐಪಿಪಿ ಯೋಜನೆಯಲ್ಲಾಗಲೀ ಅಥವಾ ಬೇರೆ ಯಾವುದೇ ಯೋಜನೆಯಡಿಯಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಲು ಸೂಚಿಸಿದ ಪ್ರಕಾರ ಈ ಕೆಲಸವು ಯಾವ ಹಂತದಲ್ಲಿರುತ್ತದೆ?*

ಇ) *ಹಾಗಿದ್ದಲ್ಲಿ ಈ ಕೆಲಸವನ್ನು ಕೂಡಲೇ ತೆಗೆದುಕೊಳ್ಳಲಾಗುವುದೇ?*

ಈ) *ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಸರಾಸರಿ ಎಷ್ಟು ಹೆರಿಗೆಗಳಾಗುತ್ತವೆ? (ಕಳೆದ ಮೂರು ವರ್ಷಗಳಲ್ಲಿ ಅಂಕಿ ಅಂಶಗಳನ್ನು ಕೊಡುವುದು)*

ಉ) *ಜಿಲ್ಲಾ ಪಂಚಾಯತ್, ಬೆಳಗಾವಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಶ್ರೀಯುತ ಭರತ್ ಲಾಲ್ ಮೀನಾ ಇವರು ಇದ್ದಾಗ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಪಿಹೆಚ್‌ಸಿ ಯನ್ನಾಗಿ ಮಾಡಬೇಕೆಂದು ಸೂಚಿಸಿದ ಪ್ರಕಾರ ಕೂಡಲೇ ಈ ಹೆರಿಗೆ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುವುದು?*

ಊ) *ಈ ಹೆರಿಗೆ ಆಸ್ಪತ್ರೆಗೆ ಇನ್ನು ಒಂದು ಹೆಚ್ಚಿನ ಮಹಿಳಾ ವೈದ್ಯಾಧಿಕಾರಿ ಹುದ್ದೆಯನ್ನು ಸೃಷ್ಟಿಸಿ ಇಲ್ಲಿ ಕೂಡಲೇ ಮಹಿಳಾ ವೈದ್ಯಾಧಿಕಾರಿಯನ್ನು ಪೋಸ್ಟಿಂಗ್ ಮಾಡಲು ಕ್ರಮ ಕೈಗೊಳ್ಳಲಾಗುವುದೇ? ಮತ್ತು ಎಷ್ಟು ದಿನಗಳಲ್ಲಿ ಕ್ರಮ ಜರುಗಿಸಲಾಗುವುದು?*

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸದರಿ ಕಟ್ಟಡವನ್ನು ಸುಮಾರು 50-55 ವರ್ಷಗಳ ಹಿಂದೆ ಟಿ.ಡಿ.ಬಿ ಬೈಲಹೊಂಗಲ ಅವರಿಂದ ಕಟ್ಟಲಾಗಿತ್ತು.

ಆ) ಐಪಿಪಿ 9 ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಪ್ರಸೂತಿ ಗೃಹ ನಿರ್ಮಾಣ ಅವಕಾಶವಿರುವುದಿಲ್ಲ. ಐಪಿಪಿ-9ರ ವತಿಯಿಂದ ನೇಸರಗಿ ಗ್ರಾಮದಲ್ಲಿ ಈಗಾಗಲೇ ಸಬ್ ಸೆಂಟರ್ ಕಟ್ಟಡ ನಿರ್ಮಾಣ ಪೂರ್ಣಗೊಂಡಿದೆ.

ಇ) 'ಅ' ನ ಪ್ರಕಾರ ಉದ್ಭವಿಸುವುದಿಲ್ಲ.

ಈ) ಪ್ರತಿ ತಿಂಗಳು ಸುಮಾರು 25 ಹೆರಿಗೆಗಳು ಆಗುತ್ತವೆ.

1996-97ರಲ್ಲಿ 315 ಹೆರಿಗೆಗಳು

1997-98ರಲ್ಲಿ	291 ಹೆರಿಗೆಗಳು
1998-99ರಲ್ಲಿ	266 ಹೆರಿಗೆಗಳು

ಊ) ನೇಸರಗಿ ಹೆರಿಗೆ ಆಸ್ಪತ್ರೆಗೆ ಹೊಂದಿಕೊಂಡಂತೆ ಪ್ರಾಥಮಿಕ ಆರೋಗ್ಯ ಕೇಂದ್ರ, ಮುಂಜೂರು ಮಾಡಲು ಜಿಲ್ಲಾ ಪಂಚಾಯತ್ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಊ) ನೇಸರಗಿ ಹೆರಿಗೆ ಆಸ್ಪತ್ರೆಗೆ ಈಗಾಗಲೇ ಒಂದು ಮಹಿಳಾ ವೈದ್ಯಾಧಿಕಾರಿಯ ಹುದ್ದೆಯನ್ನು ಮಂಜೂರು ಮಾಡಲಾಗಿದೆ. ಮತ್ತು ಈ ಹುದ್ದೆಯನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ಕಿರು ನೀರು ಯೋಜನೆ ಮಂಜೂರಾತಿಯ ಬಗ್ಗೆ

989 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಎಆರ್‌ಡಬ್ಲ್ಯುಎಸ್ ಮತ್ತು ಎನ್‌ಆರ್‌ಡಬ್ಲ್ಯುಎಸ್ ಮತ್ತು ಕಿರುನೀರು ಯೋಜನೆಗಳು 1998-99 ಹಾಗೂ 1999-2000ನೇ ಇಸವಿಯಲ್ಲಿ ಎಷ್ಟು ಮಂಜೂರಾಗಿರುತ್ತದೆ? (ತಾಲ್ಲೂಕುವಾರು ವಿವರ ನೀಡುವುದು)

ಆ) ಅವುಗಳಲ್ಲಿ ಈಗಾಗಲೇ ಎಷ್ಟು ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿದೆ? ಹಾಗೂ ಎಷ್ಟು ಕೆಲಸಗಳು ಪೂರ್ಣಗೊಂಡಿರುತ್ತದೆ?

ಇ) ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡುವಲ್ಲಿ ವಿಳಂಬವಾಗಿರುವ ಕಾರಣ ಆ ಕಾಮಗಾರಿಗಳು ಮಂದಗತಿಯಲ್ಲಿ ಪ್ರಾರಂಭವಾಗಿರುವ ಸಂಗತಿ ನಿಜವೆ?

ಈ) ಹಾಗಿದ್ದಲ್ಲಿ ನಿಗದಿತ ವೇಳೆಯಲ್ಲಿ ಈ ಕೆಲಸಗಳನ್ನು ಪೂರ್ಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ಜಲಮೂಲಗಳ ಸ್ಥಾಪನೆಯಲ್ಲಿ ವಿಳಂಬವಾಗಿರುವುದರಿಂದ ಯೋಜನೆಗಳ ಕಾಮಗಾರಿಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ.

ಈ) ಮಂಜೂರಾದ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.